225 (12) : ಶ್ರೀ ಬೋಪಯ್ಯ .ಕೆ.ಜಿ. (ಮಡಿಕೇರಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಸೈನಿಕ ಶಾಲೆ ಸ್ಥಾಪಿಸಲು ಪ್ರಸ್ತುತ ಸಾಲಿನ ಮುಂಗಡ ಪತ್ರದಲ್ಲಿ ರೂ. 1.00 ಕೋಟಿ ಹಣ ಮೀಸಲಿಟ್ಟು ಸೈನಿಕ ಶಾಲೆ ಸ್ಥಾಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಆ) ಇದರ ಸ್ಥಾಪನೆಗೆ ವಿಳಂಬವಾಗಲು ಕಾರಣಗಳೇನು, ಇದು ಎಂದಿನಿಂದ ಪ್ರಾರಂಭವಾಗುತ್ತಿದೆ; ಈಗ ಅದು ಯಾವ ಹಂತದಲ್ಲಿದೆ?

ಶ್ರೀ ರಾಮಲಿಂಗಾರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಇದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಆ) ಉದ್ಭವಿಸುವುದಿಲ್ಲ.

226 (14) : ಶ್ರೀ ಬೋಪಯ್ಯ ಕೆ.ಜಿ. ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಕೆ.ಎಸ್.ಆರ್.ಟಿ.ಸಿ. ಡಿಪೋದಲ್ಲಿ ಹಾಲಿ ಇರುವ ಬಸ್ಸುಗಳೆಷ್ಟು;

ಆ) ಇವುಗಳಲ್ಲಿ ಉಪಯೋಗಕ್ಕೆ ಬಾರದ ಬಸ್ಸುಗಳು ಸಂಖ್ಯೆ ಎಷ್ಟು;

ಇ) ಹೊಸ ಬಸ್ಸುಗಳ ಬೇಡಿಕೆ ಎಷ್ಟಿದೆ;

ಈ) ಇವುಗಳ ಬಗ್ಗೆ ಸರ್ಕಾರಿ ಕೈಗೊಂಡ ಕ್ರಮಗಳೇನು?

ಉ) ಕೊಡಗು ಜಿಲ್ಲೆಯಲ್ಲಿ ಎಷ್ಟು ಗ್ರಾಮೀಣ ಸಾರಿಗೆ ಬಸ್ಸುಗಳು ಓಡಾಡುತ್ತಿವೆ; ಎಷ್ಟು ಗ್ರಾಮೀಣ ಸಾರಿಗೆ ಬಸ್ಸುಗಳ ಬೇಡಿಕೆ ಇದೆ;

ಊ) ಇದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) 87.

ಆ) ಇಲ್ಲ.

ಇ) 1 ಬಸ್ಸಿಗೆ ಬೇಡಿಕೆ ಇದೆ.

ಈ) ಬೇಡಿಕೆಯನ್ನು ಸಧ್ಯದಲ್ಲೇ ಪೂರೈಸಲಾಗುವುದು.

ಉ) 6, 18.

ಊ) ಹಂತ ಹಂತವಾಗಿ ಸಾರಿಗೆಯ ಸೇವೆಯನ್ನು ಒದಗಿಸಲಾಗುವುದು.

227 (17) : ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಡಗು ಜಿಲ್ಲೆಗೆ ಸಂಬಂಧಪಟ್ಟಂತೆ ಸೈನಿಕ ಕಲ್ಯಾಣ ಇಲಾಖೆಯಲ್ಲಿ ಉಪ ನಿರ್ದೇಶಕರ ಹುದ್ದೆಯನ್ನು ತೆಗೆದುಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?